

ಮುನ್ನ ತಿಂಗಳುಗಟ್ಟಲೆ ತಯಾರಿಯೂ ನಡೆದಿತ್ತು. ಬೆಂಗಳೂರಿನಿಂದ ಬೆಳಿಗ್ಗೆ ಹೊರಟು, ಮಧ್ಯಾಹ್ನ ದೆಹಲಿ ತಲುಪಿ ಸಂಜೆ ಬಸ್ಸಿನಲ್ಲಿ ಮನಾಲಿಗೆ ಹೊರಟೆವು. ಬೆಳಿಗ್ಗೆ ಸುಮಾರು 8 ಗಂಟೆಗೆ ಮನಾಲಿಯ ಹೊರವಲಯದಲ್ಲಿರುವ 'ಶುರು' ಬೇಸ್‌ಕ್ಯಾಂಪ್ ತಲುಪಿದೆವು. 'ವ್ಯಾಸ' ನದಿ (ಬಿಯಾಸ್) ದಡದಲ್ಲಿರುವ ಮನಾಲಿ, ಸಮುದ್ರಮಟ್ಟದಿಂದ 2000 ಮೀಟರ್ ಎತ್ತರದಲ್ಲಿದೆ. ಸುತ್ತಲೂ ಪರ್ವತ ಶ್ರೇಣಿಗಳ ಶಿಖರಾಗ್ರದಲ್ಲಿ ಮಂಜಿನ ಟೊಪ್ಪಿಗೆ ಬೆಳ್ಳಿಯ ಮೆರುಗು ನೀಡಿತ್ತು.

ಊಟದ ನಂತರ ಮನಾಲಿಯ ಮಾರ್ಗದರ್ಶಿ ಚಾರಣದ ಬಗ್ಗೆ ವಿವರಿಸುತ್ತಾ, ಇನ್ನು ಒಂದು ವಾರ ನೀವು ಸ್ನಾನ ಮಾಡುವುದಿಲ್ಲ, ಈ ದಿನ ನಿಮಗೆ ತೃಪ್ತಿಯಾಗುವಷ್ಟು ಸ್ನಾನ ಮಾಡಿ ಎಂದರು. ಅತಿ ಅಗತ್ಯದ ವಸ್ತುಗಳನ್ನು 'ಬೆನ್‌ಬ್ಯಾಗ್'ನಲ್ಲಿ ಮತ್ತು ಉಳಿದವನ್ನು 'ರಕ್‌ಸ್ಯಾಕ್'ನಲ್ಲಿ ತುಂಬಿಸಲು ತಿಳಿಸಿದರು. 'ರಕ್‌ಸ್ಯಾಕ್' ಅನ್ನು ಹೇಸರಗತ್ತೆ ಮೇಲೆ ಸಾಗಿಸಬೇಕಿತ್ತು. ಚಾರಣದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿದರು. ಮಧ್ಯಾಹ್ನ ಚಹಾ ನಂತರ ಚಾರಣಕ್ಕೆ ಹೊಂದಿಕೊಳ್ಳಲು 4–5 ಕಿ.ಮೀ.ಗಳ ನಡಿಗೆ ಮಾಡಿದೆವು.



ಹಾವಿನ ಹೆಡೆಯಂಥ ಆಕಾರದ 'ಕೋಬ್ರಾ ಪ್ಲಾಂಟ್' ಇಲ್ಲಿನ ಆಕರ್ಷಣೆಗಳಲ್ಲೊಂದು

ಮಧ್ಯಾಹ್ನ ತುಂತುರು ಮಳೆಯಲ್ಲಿ ಲಘು ಚಾರಣ ಪ್ರಾರಂಭವಾಯಿತು. ದೈತ್ಯ ದೇವದಾರು, ಪೈನ್ ಮರಗಳ ನಡುವೆ ವಿವಿಧ ಕಾಡುಹೂಗಳ ಸೌಂದರ್ಯ ಸವಿಯುತ್ತಾ ಮುನ್ನಡೆದೆವು. ಸುಮಾರು ಒಂದು ಗಂಟೆ ನಂತರ 'ಅರ್ಜುನ ಗುಹೆ' ತಲುಪಿದೆವು. ಇಲ್ಲಿ ಅರ್ಜುನ ತಪಸ್ಸು ಮಾಡಿ ಶಿವನಿಂದ 'ಪಾಶುಪತಾಸ್ತ್ರ' ಪಡೆದ ಎಂದು ನಂಬಿಕೆ. ಮತ್ತೆ ಬೇಸ್‌ಕ್ಯಾಂಪ್‌ಗೆ ಮರಳಿದೆವು.

ಮೊದಲ ದಿನ ಬೆಳಿಗ್ಗೆ 5 ಗಂಟೆಗೆ ಎದ್ದು, ಲಘು ವ್ಯಾಯಾಮ, ತಿಂಡಿ ಮುಗಿಸಿ ಬೆನ್ನಿಗೆ ಬ್ಯಾಗ್ ಏರಿಸಿ ಉತ್ಸಾಹದಲ್ಲಿ 'ದೇವರ ದಿಬ್ಬ'ದ ಕಡೆ ಚಾರಣ ಪ್ರಾರಂಭಿಸಿದೆವು. ದಟ್ಟ ಕಾಡಿನ ಮಧ್ಯೆ, ಬೆಟ್ಟಗಳ ಇಳಿಜಾರಿಗೆ ಅಡ್ಡಲಾಗಿರುವ ಕಾಲುದಾರಿಯಂತಹ ಚಿಕ್ಕದಾರಿಯಲ್ಲಿ ಎಚ್ಚರಿಕೆಯಿಂದ ಸಾಗಿದೆವು. ನಡುವೆ ಜುಳುಜುಳು ಹರಿವ ಚಿಕ್ಕ ಪುಟ್ಟ ತೊರೆಗಳು, ಕಣ್ಣು ಹಾಯಿಸಿದಷ್ಟು ದೂರದವರೆಗೂ ವ್ಯಾಪಿಸಿದ ಹಸುರನ್ನು ಆಸ್ವಾದಿಸುತ್ತಾ, ಎರಡು ಗಂಟೆ ಅವಧಿಯಲ್ಲಿ ಅಂದಿನ ಕ್ಯಾಂಪ್ 'ಗೌರ್ದುಘಾ' ತಲುಪಿದೆವು. ಹತ್ತಿರದ ಗ್ರಾಮಗಳಿಂದ ಜಾನುವಾರುಗಳು ಇಲ್ಲಿಗೆ ಮೇಯಲು ಬರುವುದರಿಂದ ಈ ಹೆಸರು ಬಂದಿದೆಯೆಂದು ತಿಳಿಯಿತು.

ಎತ್ತರದ ಶಿಖರಗಳ ನಡುವೆ ರಸ್ತೆ ಹಾದು ಹೋಗುವುದು ಕಂಡುಬರುತ್ತಿತ್ತು. ಸುತ್ತಲೂ ಬೆಟ್ಟಗಳ ಸಾಲು ಇದ್ದು, ಮನಾಲಿ ಕಡೆಗೆ ಮಾತ್ರ ಬಾಗಿಲಿನಂತೆ ದಾರಿ ತೆರೆದಿತ್ತು. ಸಾಯಂಕಾಲ ಊಟದ ಸಮಯದವರೆಗೆ ಎಲ್ಲರೂ ಒಂದೆಡೆ ಸೇರಿ ಪರಿಚಯ ಮಾಡಿಕೊಂಡು ಮಾತುಕತೆಗಳಲ್ಲಿ ತೊಡಗಿದೆವು. ಅಷ್ಟರಲ್ಲಿ ಗೆಳೆಯರೊಬ್ಬರು ಒಂದು ಹೂವನ್ನು ತಂದರು. 'ಡ್ಯಾನ್ಸಿಂಗ್ ಲೇಡಿ' ಎನ್ನುವ ಸಾಮಾನ್ಯ ಹೆಸರಿನ 'ಆರ್ಕಿಡ್' ಜಾತಿಯ ಹೂ ಬಲು ಆಕರ್ಷಕವೆನಿಸಿತು.

ಆ ಪರಿಸರದ ಪ್ರಶಾಂತತೆಯನ್ನು ಅನುಭವಿಸಲು ಸ್ವಲ್ಪ ದೂರದಲ್ಲಿ ಮರದ ಕೆಳಗೆ ಸೂಕ್ತ ಸ್ಥಳ ಹುಡುಕಿಕೊಂಡು ಸುತ್ತಲೂ ನೋಡುತ್ತಾ ಕುಳಿತೆ. ಕಾಡಿನ ನೀರವ ಮೌನದಲ್ಲಿ ಹೊರ ಪ್ರಪಂಚದ ಪರಿವೆಯಿಲ್ಲದೆ ಪ್ರಕೃತಿಯೊಂದಿಗೆ ಲೀನವಾದಂತಹ ಸ್ಥಿತಿ. ಕೆಲವು ತಿಂಗಳ ಹಿಂದೆ ನನ್ನನಗಲಿದ ನನ್ನ ಒಲುಮೆಯ ಚೇತನ ನನ್ನ ಬಳಿಯೇ ಇದ್ದಂತೆ, ಆತ್ಮೀಯ ಸಂವಾದಗಳಲ್ಲಿ ಮತ್ತೆ ಒಂದಾದಂಥ ಅನನ್ಯ ಅನುಭೂತಿ. ಆ ಮಾಂತ್ರಿಕತೆಯಲ್ಲಿ ಸುಮಾರು ಒಂದು ಗಂಟೆ ಸಮಯ ಕರಗಿದ್ದೇ ತಿಳಿಯಲಿಲ್ಲ.

ಮಾರನೇ ದಿನ ಇನ್ನಷ್ಟು ಎತ್ತರಕ್ಕೆ ಏರಬೇಕಿತ್ತು. ಇನ್ನೂ ದಟ್ಟವಾದ ಕಾಡು. ಕೆಲವು ಕಡೆ ಸೂರ್ಯನ ಕಿರಣಗಳೇ ವಿರಳ ಎನ್ನುವಂತಹ ದಟ್ಟತೆ. ಕಿರಿದಾದ ದಾರಿ, ಬಂಡೆ ಗುಡ್ಡಗಳನ್ನು ಹತ್ತಿ ಇಳಿದು ಮುನ್ನಡೆದೆವು. ದೂರದ ಶಿಖರಗಳ ಮೇಲೆ ಮಂಜಿನ ಬೆಳ್ಳಿಹಾಸು ಮೋಹಕವಾಗಿ ಕಾಣುತ್ತಿತ್ತು. ಹರಿಯುವ ನೀರಿನ ಮೊರೆತ, ಚಿಲಿಪಿಲಿ ಹಕ್ಕಿಗಳ ಇಂಚರ, ಯಾವುದೋ ಹೊಸ ಲೋಕದಲ್ಲಿ ಸಂಚರಿಸುತ್ತಿರುವಂತಹ ಭಾವನೆಗಳೊಂದಿಗೆ ಮಧ್ಯಾಹ್ನ ಅಂದಿನ ಕ್ಯಾಂಪ್ 'ಸೆತಾನ್' ತಲುಪಿದೆವು. ಈ ದಿನ ಸುಮಾರು 500 ಮೀಟರ್ ಏರಿದ್ದೆವು. 'ಸೆತಾನ್' ಗ್ರಾಮದಂಚಿನಲ್ಲೇ ಕ್ಯಾಂಪ್ ಇದ್ದ ಕಾರಣ, ಚಾರಣದಲ್ಲಿನ ನೀರವತೆಯಿಂದ ಮತ್ತೆ ನಾಗರಿಕ ಲೋಕಕ್ಕೆ ಮರಳಿ ಬಂದಂತಾಯಿತು.

ಸಾಯಂಕಾಲವಾಗುತ್ತಿದ್ದಂತೆ ಥರಗುಟ್ಟುವ ಚಳಿಯ ಅನುಭವ. ಎರಡು–ಮೂರು ಪದರಗಳ ಉಣ್ಣೆಯ 'ಮಲಗುವ ಚೀಲದಲ್ಲಿ' ಬೆಚ್ಚಗೆ ಸೇರಿಕೊಂಡು ನಿದ್ರೆಗೆ ಜಾರಿದೆವು.